


# ರಾಮಕೃಷ್ಣ - ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಆರನೆಯ ವಾರ್ಷಿಕ ಸಮ್ಮೇಳನ

ದಿವ್ಯತ್ರಯರ ಜೀವನ - ಸಂದೇಶಗಳನ್ನು ಜನಮನಕ್ಕೆ ತಲುಪಿಸುವ ಸದುದ್ದೇಶದಿಂದ ಅನೇಕ ಸಂಘ-ಸಂಸ್ಥೆಗಳು, ಆಶ್ರಮಗಳು ಪ್ರಾರಂಭವಾಗಿ ತುಂಬ ಪರಿಣಾಮಕಾರಿಯಾಗಿ, ಬೃಹತ್ ಪ್ರಮಾಣದಲ್ಲಿ ಕಾರ್ಯಮಾಡುತ್ತಿವೆ. ಅವೆಲ್ಲವೂ ರಾಮಕೃಷ್ಣ ಮಠ ಮತ್ತು ಮಿಷನ್, ಬೇಲೂರುಮಠ ಇದರ ಮಾರ್ಗದರ್ಶನದಲ್ಲಿ **ರಾಮಕೃಷ್ಣ - ವಿವೇಕಾನಂದ ಭಾವಪ್ರಚಾರ ಪರಿಷತ್** ಎಂಬ ಹೆಸರಿನಲ್ಲಿ ಕಾರ್ಯ ಮಾಡುತ್ತಿವೆ. ೨೦೧೨ರಲ್ಲಿ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಈ ಪರಿಷತ್‌ನ ೬ನೇ ವಾರ್ಷಿಕ ಸಮ್ಮೇಳನವನ್ನು ಈ ವರ್ಷ ಗದಗಿನ ಶ್ರೀ ರಾಮಕೃಷ್ಣ - ವಿವೇಕಾನಂದ ಆಶ್ರಮದ ವತಿಯಿಂದ ೨೦೧೯ರ ಡಿಸೆಂಬರ್ ೧೩, ೧೪, ೧೫ರಂದು ಆಯೋಜಿಸಲಾಗಿತ್ತು.

ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್‌ರವರ ದಿವ್ಯಸಾನಿಧ್ಯದಲ್ಲಿ ಈ ಸಮ್ಮೇಳನವು ಮೂರು ದಿನಗಳ ಕಾಲ ನೆರವೇರಿತು. ಡಿಸೆಂಬರ್ ೧೨ರ ಸಾಯಂಕಾಲ ಗದಗಿನ ಪ್ರಮುಖ ರಸ್ತೆಗಳಲ್ಲಿ ದಿವ್ಯತ್ರಯರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು. ಇದರಲ್ಲಿ ಸಹಸ್ರಾರು ಭಕ್ತರು, ಸಾಧುಗಳು ಭಾಗವಹಿಸಿದ್ದರು. ಅಂದು ಸಂಜೆ ವಿದ್ವಾನ್ ಆರ್.ಕೆ.ಪದ್ಮನಾಭರವರಿಂದ ಸಂಗೀತ ಕಾರ್ಯಕ್ರಮ ನೆರವೇರಿತು. ಡಿಸೆಂಬರ್ ೧೩ ಬೆಳಿಗ್ಗೆ ೯-೦೦ ಗಂಟೆಗೆ ಹುಬ್ಬಳ್ಳಿಯ ಸ್ವಾಮಿ ರಘುವೀರಾನಂದಜಿಯವರ ಭಜನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ೧೦-೦೦ ಘಂಟೆಗೆ ಸ್ವಾಮಿ ಗೌತಮಾನಂದಜಿಯವರಿಂದ ಸಮ್ಮೇಳನ ಉದ್ಘಾಟನೆಗೊಂಡಿತು. ''ಇಂದು ವಿಶ್ವದಾದ್ಯಂತ ರಾಮಕೃಷ್ಣ-ವಿವೇಕಾನಂದ-ಶ್ರೀಮಾತೆಯವರ ಸಂದೇಶ ಪ್ರಸಾರವಾಗುತ್ತಿವೆ. ಅವುಗಳ ಪರಿಣಾಮದಿಂದ ಜನರ ಜೀವನದಲ್ಲಿ ಬದಲಾವಣೆ ಮೂಡುತ್ತಿದೆ. ಜನರಲ್ಲಿ ಆಧ್ಯಾತ್ಮಿಕ ಭಾವನೆ ಜಾಗೃತಿಗೊಂಡು ತ್ಯಾಗ-ಸೇವೆಗಳ ನಿಜವಾದ ಅರ್ಥ ಅವರಿಗೆ ಗೊತ್ತಾಗುತ್ತಿದೆ. ಕರ್ನಾಟಕದ ಭಾವಪ್ರಚಾರ ಸಮ್ಮೇಳನಗಳಲ್ಲಿ ನಾನು ಮೂರು ವರ್ಷಗಳಿಂದ ಭಾಗವಹಿಸುತ್ತಿದ್ದೇನೆ. ಇದರಿಂದ ಉತ್ತಮ ಕಾರ್ಯವಾಗುತ್ತಿದೆ'' ಎಂದು ಪೂಜ್ಯ ಶ್ರೀ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ ನುಡಿದರು.

ಗದಗಿನ ಆಶ್ರಮದ ಅಧ್ಯಕ್ಷರೂ, ಕಾರ್ಯಕ್ರಮದ ಆಯೋಜಕರೂ ಆದ ಸ್ವಾಮಿ ನಿರ್ಭಯಾನಂದಜಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಆರ್.ಪಾಟೀಲ ಅವರು ಸ್ವಾಗತಿಸಿದರು. ಮೈಸೂರು ಆಶ್ರಮದ ಅಧ್ಯಕ್ಷರೂ, ರಾಮಕೃಷ್ಣ ಮಠ, ಮಿಷನ್ನಿನ ಟ್ರಸ್ಟಿಗಳೂ ಆದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್‌ರವರು ಕಾರ್ಯಕ್ರಮದ ನಿಮಿತ್ತ ಭಾವಪ್ರಚಾರ








ಪರಿಷತ್ತಿನ ಎಲ್ಲ ಕೇಂದ್ರಗಳ ಕಾರ್ಯ ಚಟುವಟಿಕೆ ಮತ್ತು ಲೇಖನಗಳನ್ನೊಳಗೊಂಡ 'ದೇವಯಾನ' ಸ್ಮರಣಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಕರ್ನಾಟಕ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ, ಉಪಾಧ್ಯಕ್ಷರಾದ ಸ್ವಾಮಿ ಬೋಧಸ್ವರೂಪಾನಂದಜೀ, ಬೇಲೂರು ಮಠದ ಪ್ರತಿನಿಧಿಗಳಾಗಿ ಆಗಮಿಸಿದ್ದ ಸ್ವಾಮಿ ಅನುಪಮಾನಂದಜಿ, ಕರ್ನಾಟಕ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಸಂಚಾಲಕರಾದ ಸ್ವಾಮಿ ಪ್ರಕಾಶಾನಂದಜಿ, ಸ್ವಾಮಿ ವೀರೇಶಾನಂದಜಿ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗದಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು, ಶ್ರೀ ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಶ್ರೀ ಕಲ್ಲಯ್ಯಜ್ಜನವರು, ಕುರುಹಿನಶೆಟ್ಟಿ ಪೀಠಾಧೀಶ್ವರರಾದ ಶ್ರೀ ನೀಲಕಂಠ ಪಟ್ಟದಾರ್ಯ ಸ್ವಾಮಿಗಳು, ನಂದಿವೇರಿ ಮಠದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಲವಾರು ಜನಪ್ರತಿನಿಧಿಗಳು, ಗಣ್ಯರು ಭಾಗವಹಿಸಿದ್ದರು.

ಉದ್ಘಾಟನಾ ಸಮಾರಂಭದ ನಂತರ ಮೊದಲನೆಯ ದಿನ ಶ್ರೀ ರಾಮಕೃಷ್ಣರ ಚಿಂತನಗಳನ್ನಾಧರಿಸಿದ ಉಪನ್ಯಾಸಗಳು ಜರುಗಿದವು. ಎರಡನೆಯ ದಿನ **'ಯುವ ಸಮ್ಮೇಳನ'**, ವಿವೇಕಾನಂದರ ಚಿಂತನೆಗಳನ್ನಾಧರಿಸಿ **'ವಿವೇಕಾನಂದ ಚಿಂತನ ಧಾರಾ'**, ಮತ್ತು ಮೂರನೆಯ ದಿನ ಶ್ರೀಮಾತೆ ಶಾರದಾದೇವಿಯವರ ಜೀವನ ಸಂದೇಶಗಳನ್ನಾಧರಿಸಿ **'ಶ್ರೀ ಮಾತಾಜಿ ಚಿಂತನಧಾರಾ'** ಕಾರ್ಯಕ್ರಮಗಳು ನೆರವೇರಿದವು. ಹಲವಾರು ಸ್ವಾಮೀಜಿಗಳು, ಚಿಂತಕರು ಈ ಮೂರು ದಿನಗಳ ಕಾಲ ಉಪನ್ಯಾಸಗಳನ್ನು ನೀಡಿದರು. ಪ್ರತಿನಿತ್ಯ ಸಂಜೆ ಮತ್ತು ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕೊನೆಯ ದಿನ ಇಬ್ರಾಹಿಂ ಸುತಾರ್ ಅವರಿಂದ **'ವಿನೋದದಿಂದ ವಿವೇಕ'** ಚೆನ್ನಾಗಿ ಮೂಡಿಬಂದು, ಭಕ್ತಜನರ ಹೃನ್ಮನಗಳನ್ನು ಅರಳಿಸಿತು. ಭಕ್ತಜನರಿಗೆ ಊಟ, ವಸತಿ ಅಚ್ಚುಕಟ್ಟಾಗಿ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸುಮಾರು ೮೦೦ ಜನ ಪರಸ್ಥಳದ ಭಕ್ತಪ್ರತಿನಿಧಿಗಳು , ೨೫೦ ಸ್ವಯಂಸೇವಕರು, ೧೦೦೦ ಜನ ಸ್ಥಳೀಯ ಪ್ರತಿನಿಧಿಗಳು, ೬೫ ಜನ ಸ್ವಾಮೀಜಿಗಳು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಗದಗಿನಲ್ಲಿ ನಗರಸಭೆಯ ವತಿಯಿಂದ ಶ್ರೀ ಡಿ.ಆರ್.ಪಾಟೀಲರ ಮಾರ್ಗದರ್ಶನದಲ್ಲಿ ನಿರ್ಮಾಣವಾದ **'ವಿವೇಕಾನಂದ ಉದ್ಯಾನವನ'**ವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. ಈ ಉದ್ಯಾನವನದಲ್ಲಿ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗಿದೆ. ದಿವ್ಯತ್ರಯರ ಮಂಟಪವನ್ನು ಕೂಡ ಇಲ್ಲಿ ನಿರ್ಮಾಣ ಮಾಡಲಾಗಿದೆ. ಚಿಕಾಗೋ ಭಾಷಣ ಧ್ವನಿಮುದ್ರಿಕೆಯನ್ನು ನಿತ್ಯವೂ ಕೇಳಿಸುವ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ.



ಒಟ್ಟು ನಾಲ್ಕು ದಿನಗಳ ಕಾಲ ಜರುಗಿದ ಈ ಸಮ್ಮೇಳನ ದಿವ್ಯತ್ರಯರ ಜೀವನ ಸಂದೇಶಗಳನ್ನು ಜನರಿಗೆ ಪರಿಚಯಿಸಿ, ಅವುಗಳ ಅನುಷ್ಠಾನ, ಪ್ರಚಾರಕ್ಕೆ ಬೇಕಾದ ಸ್ಫೂರ್ತಿಯನ್ನು ನೀಡುವಲ್ಲಿ ಅತ್ಯಂತ ಯಶಸ್ವಿಯಾಯಿತು.

Managing Editor : Swami Muktidananda    Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020